

# ಮತ್ತೆ ಬಂದಳು ‘ಅನಾರ್ಕಲಿ’

ಸುಮಾರು ಹದಿನೆಂಟು– ಇಪ್ಪತ್ತು ವರ್ಷಗಳ ಹಿಂದೆ ಫ್ಯಾಷನ್ ಟ್ರೆಂಡ್ ಆಗಿದ್ದ ಅನಾರ್ಕಲಿ, ಆಮೇಲೆ ತೆರೆಮರೆಗೆ ಸರಿದಿತ್ತು. ಇದೀಗ ಮತ್ತೆ ಮುನ್ನೆಲೆಗೆ ಬಂದ ಅನಾರ್ಕಲಿ ಸಲ್ವಾರ್ ಎಲ್ಲ ವಯೋಮಾನದವರೂ ಧರಿಸಿ ಮೆರೆಯುವಂಥ ಉಡುಗೆ.

■ ಸುಮಾ ಬಿ.

2002ರಲ್ಲಿ ತೆರೆಕಂಡ ಬಾಲಿವುಡ್‌ನ ‘ದೇವದಾಸ್’ ಸಿನಿಮಾದ ‘ಮಾರ್ ಡಾಲಾ’ ಹಾಡಿನಲ್ಲಿ ಮಾಧುರಿ ದೀಕ್ಷಿತ್ ‘ಅನಾರ್ಕಲಿ’ ಉಡುಗೆ ತೊಟ್ಟು ಹೆಜ್ಜೆ ಹಾಕಿದ್ದರು. ಬೆಳ್ಳಿಪರದೆ ಮೇಲೆ ಅದ್ದೂರಿ ದಿರಿಸಿನಲ್ಲಿ ಮಿಂಚಿದ್ದ ಮಾಧುರಿ ‘ಅನಾರ್ಕಲಿ’ಯ ಜನಪ್ರಿಯತೆಗೂ ನಾಂದಿ ಹಾಡಿದ್ದರು.

ಎಲ್ಲರಿಗೂ, ಎಲ್ಲ ಕಾಲಕ್ಕೂ ಹೊಂದಿಕೊಳ್ಳುವ ಅನಾರ್ಕಲಿ ಆಗ ಟ್ರೆಂಡ್ ಆಗಿತ್ತು. ಆ ದಶಕ ಪೂರ್ತಿ ಮಿಂಚಿದ್ದ ‘ಅನಾರ್ಕಲಿ’ ಮೆಲ್ಲಗೆ ಮರೆಯಾಗಿದ್ದಳು. ಈಗ ಮತ್ತೆ ಮುನ್ನೆಲೆಗೆ ಬಂದಿದ್ದಾಳೆ. ಕರೀನಾ ಕಪೂರ್ ಖಾನ್, ಅನುಷ್ಕಾ ಶರ್ಮ, ದೀಪಿಕಾ ಪಡಕೋಣೆ, ಸೋನಂ ಕಪೂರ್, ಆಲಿಯಾ ಭಟ್ ಮೊದಲಾದ ಬಾಲಿವುಡ್ ಬೆಡಗಿಯರು ಅನಾರ್ಕಲಿಯಲ್ಲಿ ಮಿಂಚಿ ಅದರ ಜನಪ್ರಿಯತೆಗೆ ಬುನಾದಿ ಹಾಕಿದ್ದಾರೆ.

ಸಾಂಪ್ರದಾಯಿಕ ಕಾರ್ಯಕ್ರಮಕ್ಕೂ ಸೈ, ಪಾರ್ಟಿ ವೇರ್‌ಗೂ ಜೈ ಎನ್ನುವ ಅನಾರ್ಕಲಿ ಈಗ ಮಹಿಳೆಯರ ಹಾಟ್ ಫೇವರೆಟ್. ಶಾಲೆಗೆ ಹೋಗುವವರಿರಲಿ, ಕಾಲೇಜು ವಿದ್ಯಾರ್ಥಿನಿಯಾಗಿರಲಿ, ಉದ್ಯೋಗಸ್ಥ ಮಹಿಳೆ, ಗೃಹಿಣಿ, ಮಧ್ಯಮ ವಯಸ್ಕರಿರಲಿ ಎಲ್ಲ ವಯೋಮಾನದವರಿಗೂ ಹೊಂದಿಕೊಳ್ಳುವ ಉಡುಗೆಯಾಗಿ ಅನಾರ್ಕಲಿ ಮೆರೆಯುತ್ತಿದೆ. ಸ್ಥೂಲ ಕಾಯದವರಿಗೂ, ಬಳ್ಳಿಯಂತೆ ಬಳುಕುವ ಲಲನೆಯರಿಗೂ ಒಪ್ಪುವ ಗುಣ ಅನಾರ್ಕಲಿಯದ್ದು.

ಮದುವೆ ಸಮಾರಂಭವಾಗಿರಲಿ, ಹಬ್ಬ, ಔತಣ ಕೂಟ, ಧಾರ್ಮಿಕ ಕಾರ್ಯಕ್ರಮ, ಕಾಕ್‌ಟೈಲ್ ಪಾರ್ಟಿ ಹೀಗೆ ಎಲ್ಲಕ್ಕೂ ಸಂದರ್ಭಕ್ಕನುಸಾರವಾಗಿ ಅನಾರ್ಕಲಿ ಹೊಂದಿಕೊಳ್ಳುತ್ತದೆ. ಹೀಗಾಗಿಯೇ ಸೌಂದರ್ಯಪ್ರಿಯರ ವಾರ್ಡ್‌ರೋಬ್‌ನಲ್ಲಿ ಒಂದಾದರೂ ಅನಾರ್ಕಲಿ ಉಡುಗೆ ಸ್ಥಾನ ಪಡೆದಿರುತ್ತದೆ. ಮದುವೆ ಸಮಾರಂಭವೆಂದರೆ ಉಡುಗೆಗಳದ್ದೇ ಕಾರುಬಾರು. ವನಿತೆಯರ ವೈವಿಧ್ಯಮಯ ಉಡುಗೆಗಳು ಮದುವೆ ಮನೆಯ ಅಂದ ಹೆಚ್ಚಿಸುತ್ತವೆ. ಹತ್ತಿರದ ಸಂಬಂಧಿಕರ, ಅಣ್ಣ, ತಮ್ಮಂದಿರ, ಪ್ರಾಣ ಸ್ನೇಹಿತರ ಮದುವೆ ಎಂದರಂತೂ ನಾಲ್ಕೈದು ತರಹದ ಉಡುಗೆಗಳು ಜತೆಯಾಗಲೇಬೇಕು. ಇದಕ್ಕಾಗಿ ತಿಂಗಳ ಮುಂಚಿನಿಂದಲೂ ತಯಾರಿ ಶುರುವಾಗುತ್ತದೆ. ಸಂಜೆಯ ಆರತಕ್ಷತೆಗೊಂದು, ಮೆಹಂದಿ ಕಾರ್ಯಕ್ರಮಕ್ಕೊಂದು, ಮುಹೂರ್ತಕ್ಕೊಂದು, ಬೀಗರೂಟಕ್ಕೆ ಮತ್ತೊಂದು. ಎಲ್ಲದರಲ್ಲೂ ಭಿನ್ನತೆ ಕಾಯ್ದುಕೊಳ್ಳುವುದೇ ಸವಾಲು. ಈ ಸಮಯದಲ್ಲೆಲ್ಲ ‘ಅನಾರ್ಕಲಿ’ ಉತ್ತಮ ಸಾಥಿ.

ಸಾಂಪ್ರದಾಯಿಕ ಸೀರೆ ಬದಿಗೊತ್ತಿ ಬೇರೊಂದು ಆಯ್ಕೆ ಎಂದರೆ ಅನಾರ್ಕಲಿ ಎಂಬಷ್ಟರ ಮಟ್ಟಿಗೆ ಹೆಂಗಳೆಯರ ಮನ ಕದ್ದಿದೆ. ಮಾಡರ್ನ್ ಲುಕ್ ಜತೆಗೆ ಸಾಂಪ್ರದಾಯಿಕ ಸ್ಪರ್ಶ ಇಷ್ಟಪಡುವವರು ಅದ್ದೂರಿ ವಿನ್ಯಾಸದ ಅನಾರ್ಕಲಿಗೆ ಆದ್ಯತೆ ನೀಡುತ್ತಿದ್ದಾರೆ. ಬಾಡಿ ಶೇಪ್ ಅಂದ ಹೆಚ್ಚಿಸುವ, ಎಲ್ಲರ ಗಮನ ಸೆಳೆಯುವ, ಗ್ಲಾಮರಸ್ ಲುಕ್

ಚಿತ್ರ: ಎಸ್.ಕೆ. ದಿನೇಶ್